ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮವನ್ನು ರಾಜ್ಯದಲ್ಲಿ ತೀವ್ರವಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಗ್ರಾಮೀಣ ಪ್ರದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಭೂ ರಹಿತ ಕುಟುಂಬಗಳಿಗೆ ಸ್ವ ಉದ್ಯೋಗ ಅವಕಾಶಗಳನ್ನು ಒದಗಿಸುವ ಸಲುವಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಇಲ್ಲಾ.

೧೯೮೯ನೇ ಏಪ್ರಿಲ್‌ನಿಂದ ಇಲ್ಲಿಯವರೆಗೆ ಸರ್ಕಾರಿ ನೌಕರರಿಗೆ ಕೊಟ್ಟಿರುವ ಸಂಬಳ, ಪ್ರವಾಸಭತ್ಯದ ಬಗ್ಗೆ

೨೪೨. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೯ನೇ ಏಪ್ರಿಲ್‌ನಿಂದ ೧೯೯೦ರ ಫೆಬ್ರವರಿ ಕೊನೆಯವರೆಗೆ ಸರ್ಕಾರದ ವಿವಿಧ ಇಲಾಖೆಗಳಿಗೆ ಕೊಟ್ಟಿರುವ ಸಂಬಳದ ಮೊತ್ತವೆಷ್ಟು,

ಆ) ಇದರಲ್ಲಿ ವಿವಿಧ ಇಲಾಖೆಯ ಕಾರ್ಯದರ್ಶಿಗಳು, ನಿರ್ದೇಶಕರು ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಕೊಟ್ಟಿರುವ ಪ್ರವಾಸದ ಭತ್ಯ ಎಷ್ಟು ?

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಮಂತ್ರಿಗಳು). —

(ಅ) ಮತ್ತು (ಆ) ಪ್ರಶ್ನೆಗಳಿಗೆ ಉತ್ತರಿಸಲು, ಪ್ರಸ್ತುತ ಲೆಕ್ಕಪತ್ರ ಪದ್ಧತಿಯಲ್ಲಿ ಕೂಡಲೇ ಮಾಹಿತಿ ಲಭ್ಯವಾಗದು. ಹಣಕಾಸು ಸಾಲಿನ, ಅಂದರೆ ೧೯೮೯-೯೦ನೇ ಸಾಲಿನ ಅಂತಿಮ ಲೆಕ್ಕ ಪತ್ರಗಳು ಮಹಾಲೇಖಾಪಾಲರಿಂದ ಸ್ವೀಕೃತವಾದ ನಂತರವೇ ಈ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ.

ಕೆ.ಎಸ್.ಐ.ಸಿ.ನಲ್ಲಿ ಕಳೆದ ೩ ವರ್ಷಗಳಿಂದ ಆಗಿರುವ ನಷ್ಟ

೨೪೩ ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಎಸ್.ಐ.ಸಿ.ನಲ್ಲಿ ಕಳೆದ ೩ ವರ್ಷಗಳಲ್ಲಿ ಆಗಿರತಕ್ಕ ನಷ್ಟ ಎಷ್ಟು ? (ಕಾರ್ಖಾನೆವಾರು ವಿವರಣೆಗಳನ್ನು ನೀಡುವುದು).

ಆ) ಈ ನಷ್ಟಗಳುಂಟಾಗಲು ಕಾರಣಗಳೇನು ?

ಇ) ಈ ನಷ್ಟಗಳನ್ನು ತಡೆಗಟ್ಟಲು ಸರ್ಕಾರದವರು ಏನಾದರೂ ಕ್ರಮಗಳನ್ನು ಕೈಗೊಂಡಿದ್ದಾರೆಯೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ ಸಚಿವರು).—

(ರೂ. ಲಕ್ಷಗಳಲ್ಲಿ)

		೮೬-೮೭	೮೭-೮೮	೮೮-೮೯
ಅ) ೧.	ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು	(+) ೩೦.೯೭	(—)೮೮.೩೭	(—) ೫೪.೪೦
೨.	ಜೂಟು ರೇಷ್ಮೆ ಗಿರಣಿ ಚನ್ನಪಟ್ಟಣ	(—) ೨೩೮.೬೩	(—)೩೯೦.೨೧	(—)೧೮೭.೯೩
೩.	ರೇ. ನೂ ತೆಗೆಯುವ ಘಟಕ ಟಿ. ನರಸೀಪುರ	(—) ೯೭.೪೯	(—)೨೪೮.೫೨	(—)೧೫೩.೭೮
೪.	ರೇ. ನೂ. ತೆಗೆಯುವ ಘಟಕ ಕನಕಪುರ	(—)೫೮.೮೨	(—) ೬೭.೦೩	(—)೧೦೦.೯೮
	ಒಟ್ಟು	(—)೪೨೫.೯೦	(—)೭೯೪.೦೩*	(—)೪೯೭.೦೯

* ಹಿಂದಿನ ವರ್ಷಗಳಲ್ಲಿ ಬಂಡವಾಳೀಕರಿಸಿರುವ ಕಾಲಾವಧಿ ಸಾಲವಾದ ರೂ. ೪೦೧.೩೬ ಲಕ್ಷಗಳನ್ನು ಹಿಂದಿನ ಅವಧಿಯ ವೆಚ್ಚವನ್ನೊಳಗೊಂಡಿರುತ್ತದೆ.

ಆ) ೧. ಪ್ರಾರಂಭಿಕ ಬಂಡವಾಳ ಹೂಡಿಕೆಯು ಹೆಚ್ಚಿನ ಮಟ್ಟದಲ್ಲಿದ್ದು ಅದು ನಂತರದ ವಹಿವಾಟಿಗೆ ಹೋಲಿಸಿದಾಗ ಹೆಚ್ಚಿನ ಸಾಲಗಳಿಗೆ ಪೂರಕವಾಗಿರುತ್ತದೆ. ಆದ್ದರಿಂದ ನಿಗಮದ ನವೀಕರಣವು ಅಧಿಕ ಬಂಡವಾಳೀಕರಣಗೊಳಿಸಲ್ಪಟ್ಟಿರುತ್ತದೆ.

೨. ಘಟಕಗಳ ಸಂಪೂರ್ಣ ಸಾಮರ್ಥ್ಯಗಳನ್ನು ಬಳಸಿಕೊಳ್ಳಲು ಅಶಕ್ತವಾಗಿರುತ್ತದೆ.

೩. ರೇಷ್ಮೆ ನೂಲು ತೆಗೆಯುವ ಘಟಕ ಟೀ ನರಸೀಪುರಕ್ಕೆ ಸಾಕಷ್ಟು ರೇಷ್ಮೆ ಗೂಡುಗಳ ದೊರೆಯುವಿಕೆಯಲ್ಲಿನ ಕೊರತೆ.

೪) ಕರ್ನಾಟಕ ರೇಷ್ಮೋದ್ಯಮಗಳ ನಿಗಮ ನಿಯಮಿತವು ನಷ್ಟವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

೧. ನಿಗಮದ ಸಾಲದ ಹೊರೆಯನ್ನು ಕಡಿಮೆ ಮಾಡಲು ಹಾಗೂ ಸಾಲ ಸಮಾನಾಂಶ ಅನುಪಾತವನ್ನು ಆರ್ಥಿಕವಾಗಿ ಪುನರ್ ಸಂಸ್ಥಾಪಿಸಲು ಕಾಲಾವಧಿ ಸಾಲ ನೀಡಿರುವ ಆರ್ಥಿಕ ಸಂಸ್ಥೆಗಳೊಂದಿಗೆ ಚರ್ಚೆ ನಡೆಸಲಾಗಿದೆ.

೨. ಅಧಿಕ ಉತ್ಪಾದನೆಯನ್ನು ಹೊಂದುವ ಸಲುವಾಗಿ ಸಾಕಷ್ಟು ಪ್ರಮಾಣದ ಕಚ್ಚಾ ಸಾಮಗ್ರಿಗಳಾದ ರೇಷ್ಮೆ ಗೂಡು, ಜೂಟು ರೇಷ್ಮೆ ಇವುಗಳನ್ನು ಖರೀದಿಸಲು ಕ್ರಮ ವಹಿಸಲಾಗಿದೆ.

೩. ಘಟಕಗಳ ಸಂಪೂರ್ಣ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಸೂಕ್ತವಾದ ಉತ್ಪಾದನಾ ಯೋಜನೆ ಹಾಗೂ ನಿಯಂತ್ರಣ ಮಾಡಲು ಪ್ರಯತ್ನ ನಡೆಸಲಾಗುತ್ತಿದೆ.

೪. ತೀವ್ರತರವಾದ ಮಾರುಕಟ್ಟೆ ನೀತಿಯನ್ನು ಅಳವಡಿಸಲಾಗಿದ್ದು ಮಾರುಕಟ್ಟೆ ಚಟುವಟಿಕೆಗಳನ್ನು ವಿಸ್ತರಿಸಲಾಗುತ್ತದೆ.

೫. ಉತ್ಪಾದನಾ ಮತ್ತು ಮಾರುಕಟ್ಟೆ ಗುರಿಗಳನ್ನು ನಿರ್ದಿಷ್ಟಪಡಿಸಲಾಗಿದ್ದು ಅದನ್ನು ಹೊಂದಲು ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಗಣಿ ಇಲಾಖೆ ಗುತ್ತಿಗೆದಾರರ ಬಾಕಿಗಳ ಬಗ್ಗೆ

೩೮೬. ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮೀಣ),—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ ಮತ್ತು ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆ ಯಾವ ಯಾವ ವಸ್ತುಗಳಿಗೆ ಗುತ್ತಿಗೆ ನೀಡಿದೆ ?

ಆ) ಈ ವಿವಿಧ ವಸ್ತುಗಳಿಗೆ ಯಾವ ಯಾವ ದರಗಳಲ್ಲಿ ರಾಯಲ್ಟಿ ನಿಗದಿ ಮಾಡಿದೆ ?

ಇ) ಗುತ್ತಿಗೆದಾರರುಗಳಿಂದ ೧೯೮೮ರ ಜನವರಿಯಿಂದ ೧೯೯೦ ಫೆಬ್ರುವರಿ ಕೊನೆಯವರೆಗೆ ಬರಬೇಕಾದ ರಾಯಲ್ಟಿ ಬಾಕಿಯ ಮೊತ್ತ ಎಷ್ಟು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಚಿನ್ನ, ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಸುಣ್ಣ ಕಲ್ಲು, ಕ್ರೋಮೈಟ್ ಮುಂತಾದ ಮುಖ್ಯ ಖನಿಜಗಳು ಮತ್ತು ಅಲಂಕಾರಿಕ ಶಿಲೆ, ಶಹಾಬಾದ್ ಕಲ್ಲು, ಕಟ್ಟಡದ ಕಲ್ಲು, ಇಟ್ಟಿಗೆ ಮಣ್ಣು, ಪಿಂಗಾಣಿ ಮುಂತಾದ ಉಪ ಖನಿಜಗಳಿಗೆ ಗುತ್ತಿಗೆ ನೀಡಿದೆ.

ಆ) ದರಗಳ ಪಟ್ಟಿ ಲಗತ್ತಿಸಿದೆ.

ಇ) ರೂ. ೫,೬೭,೧೮,೦೨೧-೦೦